


### ಉಪಯುಕ್ತ ಮಾಹಿತಿ

ಜ. 20ರ 'ಸುಧಾ' ಸಂಚಿಕೆಯಲ್ಲಿ ಮಹಿಳೆಯರ 'ಸೊಂಟದ ವಿಷಯ'ದ ಕುರಿತ ಡಾ.ಎಚ್. ಗಿರಿಜಮ್ಮ, ಡಾ.ವಸುಂಧರಾ ಭೂಪತಿ, ಎಸ್.ಜಿ. ತುಂಗರೇಣುಕರ ಲೇಖನಗಳು ಬೊಜ್ಜಿನಿಂದಾಗುವ ದುಷ್ಪರಿಣಾಮಗಳನ್ನು ಸರಳ ಉದಾಹರಣೆಗಳಿಂದ ತಿಳಿಸಿ, ಅದನ್ನು ಹೇಗೆ ನಿಯಂತ್ರಿಸಬೇಕೆಂದನ್ನು ವಿವರಿಸಿವೆ. ಉಪಯುಕ್ತ ಮಾಹಿತಿ.

–ಮಹಾದೇವಿ, ಶಿವಮೊಗ್ಗ

### ಕಾಣದ ಸೊಂಟ!

'ಸೊಂಟದ ಮೇಲೆ (? ಬಗ್ಗೆ) ನೂರೆಂಟು ಕವಿತೆಗಳಿವೆ ಎಂದೆಲ್ಲಾ ಬರೆದಿರುವ ಮಹಿಳಾ ವೈದ್ಯರಿಬ್ಬರ ಲೇಖನಗಳಲ್ಲೂ ಒಂದೇ ಒಂದು ಚುಟುಕವನ್ನು ಕಾಣದೆ ನಿರಾಸೆಯಾಯಿತು.

ಅದಕ್ಕಾಗಿಯೇ ಸಂಕ್ರಾಂತಿ ಹಬ್ಬಕ್ಕೆಂದು ನನ್ನ ಚುಟುಕು ಕಾಣಿಕೆ:
ಆರಿಂಚು ಬರೆದರೆ ಗದ್ಯ
ನಾಲ್ಕಿಂಚು ಬರೆದರೆ ಪದ್ಯ
ಎರಡಿಂಚಿದ್ದರೆ ಚುಟುಕು
ಇಪ್ಪತ್ತೆಂಟಿದ್ದರೆ?
ಪ್ರೇಯಸಿಯ ಸೊಂಟ!

–ಡಾ.ಜಯಚಂದ್ರ ಗುಪ್ತ, ಹಾಸನ

### ಗಜಕಟಿಯ ಚಿತ್ರ: ಬೆಚ್ಚಿಬಿದ್ದೆ

ಪುಟ 22ರ ಗಜಕಟಿಯ ಫೋಟೊ ನೋಡಿ ಬೆಚ್ಚಿಬಿದ್ದೆ. ಒಂದು ಸಂದರ್ಭ ಆಕೆಯ ಗಂಡ ನರಪೇತಲನಾದರೆ ಏನಾಗಬಹುದು? ಅಥವಾ ಆತನೂ ಆಕೆಯಂತೆಯೆ ಡಬ್ಲ್ಯೂ.ಡಬ್ಲ್ಯೂ.ಎಫ್. ಆದರೆ ಏನಾದೀತು. ಉತ್ತರ ಸಿಗಲಿಲ್ಲ. ಸುಸ್ತಾದೆ!

–ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು

### ಅರ್ಥಗರ್ಭಿತ ಮಾತು

ಪ್ರತಿ ವಾರ ವಾರವೂ ಮೂಡಿಬರುವ ಮಾತೇ ಮುತ್ತು ತುಂಬ ಅರ್ಥಗರ್ಭಿತವಾಗಿವೆ. ನೋಡಲು ಚಿಕ್ಕ ಚಿಕ್ಕವುಗಳಾದರೂ ದೊಡ್ಡ ಅರ್ಥ ಹೊಂದಿವೆ. 'ಮಾತೇ ಮುತ್ತು' ಸಾಲುಗಳನ್ನು ಮತ್ತೆ ಮತ್ತೆ ಓದಬೇಕನಿಸುತ್ತದೆ.

–ಡಿ. ಯೋಗೇಶ್, ಓಬಣ್ಣನಹಳ್ಳಿ

### ಸಮಾನತೆಗೆ ಬಲ ತಂದ ಕುವೆಂಪು

ವಿಚಾರ ಲಹರಿಯಲ್ಲಿ ಶಿಕಾಕುರವರ 'ಮೌಢ್ಯವೆಂಬ ಇಲ್ಲಣ' ಓದಿದೆ. ದುಡಿಮೆಯೇ ದೇವರು ಎನ್ನುವ ಮೂಲಕ 'ವಿದ್ಯೆ' ಸರ್ವರಿಗೂ ಸಲ್ಲಬೇಕೆಂದ ಕುವೆಂಪು ಅವರು ಸಮಾನತೆಯ ಹೋರಾಟಗಳಿಗೆ ಬಲ ತಂದು, ಸಾಮಾನ್ಯರನ್ನು ಶ್ರೀಸಾಮಾನ್ಯರನ್ನಾಗಿ ಮಾಡಿದ್ದು ಅವರ ಸಾಹಿತ್ಯದ ಕ್ರಾಂತಿಯೇ ಸೈ. ಕುವೆಂಪುರ 'ಜಲಗಾರ', 'ಏಕಲವ್ಯ', 'ಶಂಭೂಕ' ಮುಂತಾದ ನಾಟಕಗಳ ಸಂದೇಶ ಶತಮಾನಗಳಿಂದ ನೋವುಂಡ ಶೋಷಿತರಿಗೆ ಛಲ– ಬಲ ತಂದುಕೊಡುವಂತಿವೆ.

–ಕೊಟ್ರಯ್ಯ ಹಿರೇಮಠ, ಬಸರಕೋಡು

### ಆದರ್ಶ ವ್ಯಕ್ತಿತ್ವ

'ಕುವೆಂಪು ವ್ಯಕ್ತಿತ್ವ ಮತ್ತು ಸಾಹಿತ್ಯ ವರ್ತಮಾನದ ತಲ್ಲಣಗಳಿಗೆ ಬೆಳಕು ತೋರಿಸುವ ಶಕ್ತಿ ಮತ್ತು ಹೊಳಹುಗಳನ್ನು ಹೊಂದಿದೆ' ಎಂಬ ಶಿಕಾಕು ಅವರ ಮಾತು ಕುವೆಂಪು ಅವರ ಆದರ್ಶ ವ್ಯಕ್ತಿತ್ವವನ್ನು ಅನಾವರಣಗೊಳಿಸಿದೆ.

ಎಸ್.ಚನ್ನಪ್ಪ, ಮೈಸೂರು

### ವಾಸ್ತವ ಕಥೆ

'ಹೊಸ ವರ್ಷದಲ್ಲಿ ಹೊಸ ನೀನು...' ಮಾಯಾ ವಿ. ಶೆಣ್ಯೆರವರ ಈ ಕಥೆ ವಾಸ್ತವಕ್ಕೆ ಹತ್ತಿರದ್ದು.

–ಎಚ್. ಆನಂದ್ ಕುಮಾರ್, ಚಿತ್ರದುರ್ಗ

### ಕರುಳು ಚುರುಕ್

ಕಮಲಾ ನರಸಿಂಹರ 'ಸೀತಾ' ಓದಿದೆ. ರಕ್ಷಿಸಬೇಕಾದ ಕೆಲವು ಪೊಲೀಸರೇ ಸೀತೆಯಂತಹ ವೇಶ್ಯೆಯರಿಗೆ ಯಮಯಾತನೆ ನೀಡುವುದನ್ನು ಆಕೆಯ ಮಾತುಗಳಲ್ಲೇ ಕೇಳಿದಾಗ ಕರುಳು ಚುರುಕ್ ಎನ್ನುತ್ತದೆ. ನಮ್ಮ ಸಂಪ್ರದಾಯಗಳು ಹಾಗೂ ನಮ್ಮವರ ನಡೆ ಹೇಗಿದೆ ಎಂದರೆ– ಬರೀ ವೇಶ್ಯೆಯರನ್ನು ಭೇಟಿ ಮಾಡಿದ ಕಾರಣಕ್ಕೆ ಪ್ರಜ್ಞಾ ಮುರಳಿಯಿಂದ ತಿರಸ್ಕೃತಳಾಗುತ್ತಾಳೆ! ಇದು ವಸ್ತುಸ್ಥಿತಿ.

–ಎಚ್.ಎಂ. ಕಾಳಮ್ಮ, ಬಸರಕೋಡು

### ಮುಂಚೆಯೇ ಪ್ರಕಟ

ಕೆ.ಎಸ್. ವಿಜಯಕುಮಾರ್‌ರವರ ಎಸ್.ಎಸ್.ಎಲ್.ಸಿ. ಪರೀಕ್ಷೆ ಒಂದಿಷ್ಟು ಕಿವಿಮಾತು ಲೇಖನ ಸಕಾಲಿಕವಾದರೂ, ಫೆಬ್ರುವರಿ ತಿಂಗಳ ಮೊದಲವಾರ ಬರಬೇಕಿತ್ತು. ಆದರೂ ಹತ್ತನೆಯ ತರಗತಿ ವಿದ್ಯಾರ್ಥಿಗಳು ಚೆನ್ನಾಗಿ ಅಭ್ಯಸಿಸಿ ಪೂರ್ವ ಸಿದ್ಧತೆ ಮಾಡಿಕೊಳ್ಳುವುದು ಉತ್ತಮ. ಯುವ ಅಂಕಣದಲ್ಲಿ 'ಪರೀಕ್ಷೆಯಲ್ಲಿ ಹೀಗೇಕೆ?' (ರೇಷ್ಮಾ ಎ.ಎಸ್. ಬಾಳೆಹೊನ್ನೂರು) ಅರ್ಥಪೂರ್ಣ ಮತ್ತು ಸಕಾಲಿಕ.

–ಎಂ.ಎಲ್. ಲಕ್ಷ್ಮಣರಾವ್, ದಾವಣಗೆರೆ

### ಬಹುಮುಖತೆ ಪರಿಚಯ

ಮೂಡಬಿದರೆಯಲ್ಲಿ ಪ್ರತಿ ವರ್ಷ ಶಿಸ್ತಾಗಿ ನಡೆವ 'ಆಳ್ವಾಸ್ ವಿರಾಸತ್'ನ ಭಾಗವೇ ಆದ 'ಶಿಲ್ಪ ವಿರಾಸತ್' ಬಗೆಗಿನ ಚಂದ್ರಹಾಸ ಕೋಟೆಕಾರರ ಲೇಖನ ಸಮ್ಮೇಳನದ ಬಹುಮುಖವನ್ನು ಪರಿಚಯಿಸಿದೆ. ಮೋಹನ ಆಳ್ವ ಅವರು ಯಾರ ನೆರವೂ ಇಲ್ಲದೆ ಸ್ವತಂತ್ರವಾಗಿ ಆಯೋಜಿಸುವ ಈ ವಿರಾಸತ್ ಇತರರಿಗೂ ಮಾದರಿಯಾಗಬೇಕು.

–ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

### ಹಕ್ಕಿಗಳ ಜೀವನಶೈಲಿ ಪರಿಚಯ

ಎಂ.ಕೆ.ಯವರ 'ಸ್ವರ್ಗದ ಹಕ್ಕಿಗಳು' ಲೇಖನ ಹಕ್ಕಿಗಳ ಪರಿಚಯ, ಅವುಗಳ ಜೀವನಶೈಲಿ ಮತ್ತು ಅವುಗಳೊಂದಿಗಿನ ಮಾನವ ಸಂಬಂಧದ ಬಗ್ಗೆ ಒಂದು ರೀತಿಯ ಹೊಸ ಮಜಲನ್ನು ಸೃಷ್ಟಿಸಿತು.

–ಸರ್ದಾರ್ ಎಂ., ಅರಸೀಕೆರೆ

